

■ ಪೂರ್ಣಿಮಾ ಹೆಜಮಾಡಿ

# ವರ್ಣರಂಜಿತ ದಿಯಾ

ಪಟಾಕಿ ಸಿಡಿಸಿ, ಸಿಹಿತಿಂಡಿ ತಿಂದು, ಹೊಸ ಬಟ್ಟೆ ಧರಿಸಿ ಸಂಭ್ರಮಿಸಿ ಬೆಳಕಿನ ಹಬ್ಬ ದೀಪಾವಳಿಗೆ ದಿಯಾ ಬೇಕೇ ಬೇಕು. ಬಣ್ಣ ಬಣ್ಣದ ಕ್ಯಾಂಡಲ್‌ಗಳು ದೀಪಾವಳಿ ಹಬ್ಬಕ್ಕೆ ಮೆರುಗು ನೀಡುವಂಥವು. ಈ ಕ್ಯಾಂಡಲ್‌ಗಳನ್ನು ಮನೆಯಲ್ಲೇ ತಯಾರಿಸಬಹುದು.

ವರ್ಣರಂಜಿತ ಕ್ಯಾಂಡಲ್‌ಗಳು ಮನೆ ಮುಂದೆ ಹಚ್ಚಿದರೆ ಅದರ ಅಂದ, ಸೊಬಗೇ ಬೇರೆ. ಮಕ್ಕಳಿಗೂ ಖುಷಿ ಕೊಡುವ ದೀಪಾವಳಿ ಕ್ಯಾಂಡಲ್‌ಗಳನ್ನು ಹಲವು ಡಿಸೈನ್‌ಗಳಲ್ಲಿ ಮಾಡಬಹುದು. ಇವುಗಳನ್ನು ಮನೆ ಸಿಂಗರಿಸಲು ಬಳಸುವುದಷ್ಟೇ ಅಲ್ಲ, ಸ್ನೇಹಿತರಿಗೆ, ಬಂಧುಗಳಿಗೆ ಉಡುಗೊರೆಯಾಗಿಯೂ ನೀಡಬಹುದು.

ಡಿಸೈನರ್ ಕ್ಯಾಂಡಲ್‌ಗಳನ್ನು ತಯಾರಿಸುವುದು ಹೇಗೆ?

ಈ ಸಾಮಗ್ರಿ ಬಳಸಿ: ಇಂಡಿಯನ್ ಅಥವಾ ಚೈನಾ ವ್ಯಾಕ್ಸ್, ಸ್ಟಿಯರಿಕ್ ಆಸಿಡ್, ಮೇಣದ ಬತ್ತಿ ತಯಾರಿಸುವ ಅಚ್ಚು, ಕ್ಯಾಂಡಲ್ ಆಯಿಲ್ ಅಥವಾ ಅಡುಗೆಗೆ ಬಳಸುವ ಎಣ್ಣೆ, ದಪ್ಪ ದಾರ ಮತ್ತು ಕತ್ತರಿ. ಬಣ್ಣ ಬಣ್ಣದ ಬಿ ವ್ಯಾಕ್ಸ್ ಶೀಟ್ಸ್, ಹೇರ್ ಡ್ರೈಯರ್, ಹೋಳಿ ಆಡುವಾಗ ಬಳಸುವ ಬಣ್ಣದ ಪುಡಿಗಳು.

ಹೀಗೆ ಮಾಡಿ: ಒಂದು ಪಾತ್ರೆಯಲ್ಲಿ ವ್ಯಾಕ್ಸ್ ತೆಗೆದುಕೊಳ್ಳಿ. ಒಂದು ಕಿಲೋ ಇಂಡಿಯನ್ ವ್ಯಾಕ್ಸ್ ಆದರೆ 30 ಗ್ರಾಂ ಸ್ಟಿಯರಿಕ್ ಆಸಿಡ್, ಚೈನಾ ವ್ಯಾಕ್ಸ್ ಆದರೆ 10 ಗ್ರಾಂ ಸ್ಟಿಯರಿಕ್ ಆಸಿಡ್ ಹಾಕಿ ಬಿಸಿ ಮಾಡಿ. ಸ್ಟಿಯರಿಕ್ ಆಸಿಡ್ ಹಾಕುವುದರಿಂದ ಒಳ್ಳೆಯ ಫಿನಿಶಿಂಗ್ ಬರುತ್ತದೆ. ವ್ಯಾಕ್ಸ್ ಕರಗಿದಾಗ ನಿಮಗೆ ಬೇಕಾದ ಬಣ್ಣವನ್ನು ಹಾಕಿ ಚೆನ್ನಾಗಿ ಕದಡಿ. ನಿಮಗೆ ಘಮ್ ಎನ್ನುವ ಸುವಾಸನೆಯುಳ್ಳ ಕ್ಯಾಂಡಲ್ ಬೇಕೆಂದರೆ ಸ್ವಲ್ಪ ಪರ್ಫ್ಯೂಮ್ ಹಾಕಿ ಸ್ಟವ್ ಆರಿಸಿ. ಕ್ಯಾಂಡಲ್ ಅಚ್ಚಿಗೆ ಅಡುಗೆ ಎಣ್ಣೆ ಸವರಿ ಒಂದು ದಾರವನ್ನು ಹಾಕಿಡಿ. ವ್ಯಾಕ್ಸ್ ಬೆಚ್ಚಗಿದ್ದಾಗ ಅಚ್ಚಿಗೆ ಹಾಕಿಬಿಡಿ. ಅಚ್ಚಿನ ಶೇ.90ರಷ್ಟು ಮೇಣ ತುಂಬಿಸಿ, ಪೂರ್ತಿ ತುಂಬಿಸಬೇಡಿ. ಚೆನ್ನಾಗಿ ಆರಿದ ನಂತರ ಅಚ್ಚಿನಿಂದ ಹೊರ ತೆಗೆಯಿರಿ. ಸುಲಭವಾಗಿ ತೆಗೆಯಲು ಬರದಿದ್ದರೆ ಸ್ವಲ್ಪ ಹೊತ್ತು ಫ್ರಿಡ್ಜ್ ನಲ್ಲಿಟ್ಟು ನಂತರ ತೆಗೆಯಿರಿ.



ನಂತರ ತವಾ ಬಿಸಿ ಮಾಡಿ ಮೇಣದ ಬತ್ತಿಯ ಮೇಲ್ಭಾಗ ಹಾಗೂ ತಳಭಾಗವನ್ನು ತವಾ ಮೇಲೆ ಉಜ್ಜಿ ಫಿನಿಶಿಂಗ್ ಮಾಡಿಕೊಳ್ಳಿ. ಈಗ ಡಿಸೈನ್ ಮಾಡಲು ಕ್ಯಾಂಡಲ್ ತಯಾರಾಯಿತು. ಬಣ್ಣ ಬಣ್ಣದ ಬಿ ವ್ಯಾಕ್ಸ್ ಶೀಟ್ಸ್ ಗಳನ್ನು ಬೇಕಾದ ಆಕಾರಕ್ಕೆ ಕತ್ತರಿಸಿ ಕ್ಯಾಂಡಲ್ ಮೇಲೆ ಅಂಟಿಸಿ ಹೇರ್ ಡ್ರೈಯರ್‌ನಿಂದ ಬಿಸಿ ಮಾಡಿ. ಸುಂದರವಾದ ಕ್ಯಾಂಡಲ್ ತಯಾರಾಯಿತು.

ಒಂದು ಬಿಳಿ ಬಣ್ಣದ ಕ್ಯಾಂಡಲ್ ಮೇಲೆ ಬಣ್ಣದ ಪುಡಿಗಳನ್ನು ಅಲ್ಲಲ್ಲಿ ಲೇಪಿಸಿ ಚೆನ್ನಾಗಿ ಒತ್ತಿ ಹೇರ್ ಡ್ರೈಯರ್ ನಿಂದ ಬಿಸಿ ಮಾಡಿ, ಕೈಯಿಂದ ಬಣ್ಣಗಳನ್ನು ಹರಡಿ. ಮಲ್ಟಿ ಕಲರ್ ಎಫೆಕ್ಟ್ ಬರುತ್ತದೆ.

ಈ ರೀತಿ ನಿಮಗೆ ಬೇಕಾದ ಡಿಸೈನ್ ಕ್ಯಾಂಡಲ್ಸ್ ಮಾಡಿ ದೀಪಾವಳಿಗೆ ಹಾಗೂ ವಿಶೇಷ ದಿನಗಳಲ್ಲಿ ಮನೆಯನ್ನು ಅಲಂಕರಿಸಿ. ■